ಮುನ್ಸೀಫರ ನೇಮಕಾತಿ ಕುರಿತು.

1802. ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ) : ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರವು 34 ಅಭ್ಯರ್ಥಿಗಳನ್ನು ಮುನ್ಸೀಫ್ ಹುದ್ದೆಗೆ ಆಯ್ಕೆ ಮಾಡಿದ್ದು, ಅವರಿಗೆ ನೇಮಕಾತಿ ಆಜ್ಞೆಯನ್ನು ನೀಡಲಾಗಿದೆಯೆ; ಇಲ್ಲದಿದ್ದಲ್ಲಿ ಯಾವಾಗ ನೀಡಲಾಗುವುದು ;

ಆ) ನೇಮಕಾತಿ ನೀಡಿದ್ದಲ್ಲಿ ಎಷ್ಟು ಅಭ್ಯರ್ಥಿಗಳಿಗೆ ನೀಡಲಾಗಿದೆ ಹಾಗೂ ಉಳಿದವರಿಗೆ ಯಾವಾಗ ನೇಮಕಾತಿ ನೀಡಲಾಗುವುದು ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು) :

ಅ) ಕರ್ನಾಟಕ ಉಚ್ಚ ನ್ಯಾಯಾಲಯವು ಮುನ್ಸೀಫ್ ಹುದ್ದೆಗಳಿಗೆ ಆಯ್ಕೆ ಮಾಡಿದ 34 ಮಂದಿ ಅಭ್ಯರ್ಥಿಗಳ ಪೈಕಿ 5 ಮಂದಿ ಅಭ್ಯರ್ಥಿಗಳನ್ನು ಮುನ್ಸೀಫ್‌ರನ್ನಾಗಿ ನೇಮಕಾತಿ ಮಾಡಿದ್ದು. ಉಳಿದ 29 ಮಂದಿಗಳನ್ನು ನೇಮಕಾತಿ ಮಾಡುವ ವಿಚಾರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ಮೇಲ್ಕಂಡ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶಿಗ್ಗಾಂವ್ ತಾಲ್ಲೂಕಿನ ಗ್ರಾಮಗಳ ಬಸ್ ಸೌಲಭ್ಯದ ಕುರಿತು

1915. ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಎಷ್ಟು ಷೆಡ್ಯೂಲ್ ಬಸ್ ಕೊಡಲಾಗಿದೆ ; ಹುಬ್ಬಳ್ಳಿ-ಧಾರವಾಡದಲ್ಲಿ ಎಷ್ಟು ಷೆಡ್ಯೂಲ್ ಬಸ್‌ಗಳಿವೆ ;

ಆ) ಉಭಯ ತಾಲ್ಲೂಕುಗಳಲ್ಲಿ

ಇ) ಶಿಗ್ಗಾಂವ್ ತಾಲ್ಲೂಕು ಐವಹಳ್ಳಿ, ಹುಣವೆರಟ್ಟಿ ಗ್ರಾಮಗಳಿಗೆ ಇನ್ನು ಎಷ್ಟು ದಿವಸಗಳಲ್ಲಿ ಬಸ್ ಸಂಚಾರ ಪ್ರಾರಂಭವಾಗುವುದು ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಅ) ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ 73 ವಾಹನಗಳು ಸಂಚರಿಸುತ್ತಿವೆ. ಹುಬ್ಬಳ್ಳಿ ಹಾಗೂ ಧಾರವಾಡ ನಗರಗಳಲ್ಲಿ 158 ವಾಹನಗಳು ಸಂಚರಿಸುತ್ತಿವೆ.

ಆ) ಶಿಗ್ಗಾಂವ ತಾಲ್ಲೂಕಿನಲ್ಲಿ 20 ಹಳ್ಳಿಗಳಿಗೆ ಹಾಗೂ ಸವಣೂರು ತಾಲ್ಲೂಕಿನಲ್ಲಿ 5 ಹಳ್ಳಿಗಳಿಗೆ ವಾಹನ ಸಂಪರ್ಕ ಇರುವುದಿಲ್ಲ.

ಇ) ಶಿಗ್ಗಾಂವ ತಾಲ್ಲೂಕಿನಲ್ಲಿ ಈ ಹಳ್ಳಿಗಳು ಬರುವುದಿಲ್ಲ. ಆದರೆ ವನಹಳ್ಳಿ ಮತ್ತು ಹುಣಸಿಕಟ್ಟಿ ಹಳ್ಳಿಗಳು ಶಿಗ್ಗಾಂವ ತಾಲ್ಲೂಕಿನಲ್ಲಿ ಬರುವುವು. ಈ ಹಳ್ಳಿಗಳು ವಾಹನ ಸಂಚಾರಕ್ಕೆ ಯೋಗ್ಯವಾದ ರಸ್ತೆಗಳನ್ನು ಹೊಂದಿರುವುದಿಲ್ಲ. ಆದರೂ ವಾಹನ ಸಂಚಾರಕ್ಕೆ ಯೋಗ್ಯವಾದ ರಸ್ತೆಯಾದ ನಂತರ, ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗುವುದು.